ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ –

20. ಹಾರಮಕ್ಕಿ ಸರ್ವೆ ನಂಬರು 109/1 ಕ್ಕೆ ಸಂಬಂಧಿಸಿದಂತೆ 2 ನೇ ಆರೋಪಿ ಫ್ರಾಸಾ.2, 3, 5 ಮತ್ತು ರಾಮಯ್ಯರವರ ವಿರುದ್ಧ ಮೂಡಿಗೆರೆ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.ನಂ.28/2021 ರಂತೆ ದಾವೆಯನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ಗಂಡಸರಿಗೆ ಗೊತ್ತಿದೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯ ಪ್ರತಿಬಂಧಕಾಜ್ಞೆಯನ್ನು ನೀಡಿದ್ದರೂ ಸಹ ನೀವು ಆರೋಪಿತರಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ.

21. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು ಮತ್ತು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡರು. ನ್ಯಾಯಾಧೀಶರ ಬಳಿ ಇದೇ ರೀತಿ ಹೇಳಬೇಕೆಂದು ಪೊಲೀಸರು ನಿಮಗೆ ಹೇಳಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಪೊಲೀಸರಿಗೆ ನಾನು ಬರವಣಿಗೆ ಮಾಡಿಕೊಟ್ಟಿಲ್ಲ, ಆದರೆ ಅವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ಬರೆದುಕೊಂಡ ಪೊಲೀಸರು ಯಾರೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ದೂರನ್ನು ಬರವಣಿಗೆ ಮಾಡಿ ಕೊಟ್ಟಿಲ್ಲ, ಆದರೆ ನಾನು ಹೇಳಿದಂತೆ ಅವರು ಬರೆದುಕೊಂಡಿದ್ದಾರೆ. ನ್ಯಾಯಾಧೀಶರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುವ ವಿಚಾರಗಳನ್ನು ಪೊಲೀಸರಿಗೂ ತಿಳಿಸಿದ್ದೇನೆ.

22. ನೀರಿನ ಟ್ಯಾಂಕ್ ಇದೆ ಮತ್ತು ನಾನು ಅಲ್ಲಿಗೆ ನೀರನ್ನು ತರಲು ಹೋಗಿದ್ದೆನು ಎನ್ನುವ ವಿಚಾರವನ್ನು ನೀವು ನ್ಯಾಯಾಧೀಶರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು

ಎನ್ನುತ್ತಾರೆ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಫ್ರಾಸಾ.2, 4 ಮತ್ತು 5 ರವರು ಇದ್ದರು. ಆಸ್ಪತ್ರೆಗೆ ದಾಖಲಾದ ದಿನವೇ ಸಂಜೆ ಫ್ರಾಸಾ.2, 4 ಮತ್ತು 5 ರವರನ್ನು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಅವರು ಎಷ್ಟು ದಿನಗಳವರೆಗೆ ಇದ್ದರು ಎಂದರೆ ಸಾಕ್ಷಿ ಸುಮಾರು 8 ದಿನ ಎನ್ನುತ್ತಾರೆ.

23. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನೆಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಸ್ವಾಧೀನದಲ್ಲಿರುವ ಇಡುವಳಿ ಜಮೀನನ್ನು ನೀವು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಆರೋಪ ಹೊರಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ನೀರಿನ ಟ್ಯಾಂಕ್ ಇಲ್ಲ, ಎಲ್ಲರ ಮನೆಯಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ ಹಾಗಾಗಿ ನೀವು ಹೇಳಿದಂತೆ ನೀವು ಎಂದೂ ನೀರನ್ನು ತರಲು ಟ್ಯಾಂಕಿನ ಹತ್ತಿರ ಹೋಗಿರಲಿಲ್ಲ ಎಂದರೆ ಸರಿಯಲ್ಲ.

24. ಎಲ್ಲಾ ಮುದ್ದೆಮಾಲುಗಳನ್ನು ನೀವು ಮತ್ತು ಇತರೆ ಸಾಕ್ಷಿದಾರರು ಸೇರಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರು ಪಡಿಸಿದ್ದೀರಿ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.